'ಹೀಗೆ ಅತ್ರೆ ನಿನ್ನ ಸಮಸ್ಯೆ ಮುಗಿಯೊಲ್ಲ... ಸುನಂದಮ್ಮನೋರ ಮನೆಗೆ ಹೋಗಿ ಅವರ ನೆರವು ಕೇಳೋಣ. ಅವ್ರು ನಿಂಗೆ ಏನಾದರೊಂದು ವ್ಯವಸ್ಥೆ ಮಾಡಿಕೊಡ್ತಾರೆ. ಸದ್ಯಕ್ಕೆ ನಮ್ಮ ಮನೆ ಸೌದೆ ಕೋಣೆ ಖಾಲಿ ಮಾಡಿಕೊಡ್ತೀನಿ. ಸುಮ್ನೆ ಅಳ್ಬೇಡ...' ಎಂದು ಅವಳು ಅಳಲು ತೋಡಿಕೊಂಡಾಗ ಸಮಾಧಾನ ಪಡಿಸಿದರು. ಗಂಗೆ ತಾತ್ಕಾಲಿಕವಾಗಿ ಶ್ರೀಧರ ಭಟ್ಟರ ಮನೆಯ ಕಟ್ಟಿಗೆ ಕೋಣೆಯಲ್ಲಿ ತಂಗಲು ಹೋದಳು. ಆದರೇಕೊ ಏನೇನೊ ಅಳುಕು ಎದೆಯನ್ನು ಹಿಂಡಿದ ಹಾಗಾಯಿತು. ಎದೆ ಬಡಿದುಕೊಂಡು, ಉಸಿರು ಕಟ್ಟಿಕೊಂಡಂತೆ ಅನ್ನಿಸಿದಾಗ, ಕೈಕಾಲು ನೀರಾದಾಗ ಅವಳಿಗೆ ಸತ್ತೇ ಹೋಗುವೆನೇನೊ ಎಂದು ಭಯವಾಯಿತು. ಮುಂದೆ ಮಗುವಿನ ಗತಿ...?

ಆ ದಿನ ಮಗುವನ್ನು ಒಳಗೆ ಹಚ್ಚಡದ ಮೇಲೆ ಉರುಳಿಸಿ, ಗಂಗೆ ಹೊರಗೆ ಬಿಡುವಾದಾಗ ಬಂದು ಸುಮ್ಮನೆ ನಿಂತಿದ್ದಳು.

'ಗಂಗಾs...' ಎಂಬ ಆಳವಾದ ದನಿ ಕೇಳ ಬಂದೊಡನೆ ಬೆಚ್ಚಿದಳು. ಪ್ರಸಾದ ಹೇಳಿದ, 'ಗಂಗಾ... ನೀನು ದಿನ ದಿನಕ್ಕೆ ನಿಶ್ಯಕ್ತಳಾಗುತ್ತಿರುವಂತೆ ಕಾಣುತ್ತೆ... ದೇವಸ್ಥಾನದಲ್ಲಿ ಕೆಲಸ ಜಾಸ್ತಿ ಆಯಿತೇನು...? ಶಿವಣ್ಣನನ್ನು ಕರೆಸಿ ತೋರ್ಸೋದೇನು...? ಅವ್ನೂ ಊರಿಗೆ ಹೋಗಿ ಬರ್ತೀನಿ ಅಂದಿದ್ದ... ದೇವಸ್ಥಾನಕ್ಕೆ ಬಂದ್ರೆ ಹೇಳ್ತೀನಿ...'

ಅವಳ ನೋವು ಚೀರಿಕೊಂಡಿತು. ಬಾಯಿ ಬಿಡಬೇಡ ಎಂದು ಆಜ್ಞಾಪಿಸಿತು. ಸುಮ್ಮನೇ ಇದ್ದುಬಿಟ್ಟಳು.

ಪ್ರಸಾದನೇ ಮಾತು ಮುಂದುವರಿಸಿದನು. 'ನಮ್ಮ ತಂದೆ ನಿನ್ನನ್ನು ಸುನಂದ ಬನ್ನಪ್ಪನವರು ಮನೆಗೆ ಕರ್ಕೊಂಡ್ಹೋಗಿ ಅವ್ರಿಂದ ಸಹಾಯ ಮಾಡ್ಸು ಅಂತ ಹೇಳಿದಾರೆ... ಕರ್ಕೊಂಡ್ಹೋದ್ರೆ ಬರ್ತೀಯಾ...?'

'ನನಗ ಅವ್ರೇನು ಸಹಾಯ ಮಾಡ್ಲಿಕ್ಕಾದೀತು...?'

'ಮನಸ್ಸು ಮಾಡದ್ರೆ ಏನು ಬೇಕಾದ್ರೂ ಸಹಾಯ ಮಾಡಬಲ್ಲರು. ಮಕ್ಕಳು, ಮಹಿಳೆಯರಿಗೆ ಸಹಾಯ ಹಸ್ತ ಚಾಚುವುದೇ ಅವರ ಹವ್ಯಾಸ.' ನೀನು ಹೀಗೆ ನವೆದು ಹೋಗಲು ಅವರು ಖಂಡಿತಾ ಬಿಡೂದಿಲ್ಲ. ನಿಂಗೆ ಇರಲು ವ್ಯವಸ್ಥೆ ಮಾಡ್ತಾರೆ'

'ಇಷ್ಟು ನೀವು ಹೇಳಿದ್ದೇ ಆದ್ರೆ ಆಯ್ತು... ಆದ್ರೆ ನೀವು ಜೊತೆಯಲ್ಲಿ ಅವ್ರ ಮನಿಗೆ ಬರೋದು ಬ್ಯಾಡ... ನಾನು ಒಬ್ಬಾಕೀನೆ ಹೋಗ್ತೀನಿ...'

ಗಂಗೆ ತಮ್ಮ ಮನೆಯಲ್ಲಿ ಆಶ್ರಯ ಪಡೆಯುವುದು ಶ್ರೀಧರ ಭಟ್ಟರ ಪತ್ನಿಗೆ ಸ್ವಲ್ಪವೂ ಇಷ್ಟವಿರಲಿಲ್ಲ. 'ಎಲ್ಲ ಬಿಟ್ಟು, ಅವಳನ್ನ ಯಾಕೆ ಮನೇಲಿ ತಂದಿಟ್ಟು ಕೊಳ್ಳಬೇಕು?' ಎಂದು ಗಂಗೆಯ ಚರಿತ್ರೆ ಬಲ್ಲ ಹೆಂಗಸರು ಚುಚ್ಚಿ ಮಾತಾಡುವುದು ಭಟ್ಟರ ಹೆಂಡತಿಗೆ ಬೇಸರ ತರುತ್ತಿತ್ತು. ಆಕೆ ಗಂಡನನ್ನೂ ಬಿಟ್ಟು ಕೊಡುತ್ತಿರಲಿಲ್ಲ...' ಕೆಂಪಣ್ಣನವರು ಹೇಳಿದ್ರು ಅದಕ್ಕೇ ನಮ್ಮೆಜಮಾನರು ಒಪ್ಪಿದ್ರು ಅಷ್ಟೆ. ನಮ್ಮ ಮನೆ ನಮ್ಮ ಸ್ವಂತದಲ್ಲವಲ್ಲ... ಅದು ದೇವಸ್ಥಾನಕ್ಕೆ ಸೇರಿದ್ದು. ನಾವೇನು ತಾನೇ ಹೇಳಕ್ಕಾಗಾತ್ತೆ...? ಇರ್ಲಿ ಬಿಡಿ... ಗತಿಗೆಟ್ಟ ಹೆಣ್ಣಿಗೆ ಆಶ್ರಯ ಕೊಟ್ಟ ಪುಣ್ಯನಾದ್ರೂ ಬರತ್ತೆ..! ಅಲ್ಲದೆ... ಅವ್ಳೇನು ಇಲ್ಲೆ ಇದ್ ಬಿಡಲ್ಲ... ಬೇರೆ ವ್ಯವಸ್ಥೆ ಆಗೋ ತನಕ ಇಲ್ಲಿ ತಾತ್ಕಾಲಿಕವಾಗಿ ಇರ್ತಾಳಷ್ಟೆ...' ಎಂದು ಸಮಾಧಾನ ಹೇಳಿಕೊಂಡ ಆಕೆ ಏಕಾಂತದಲ್ಲಿ ಗಂಡನನ್ನು ಪೀಡಿಸುತ್ತಾ, ಆ ನೀತಿಗೆಟ್ಟ ಹೆಣ್ಣನ್ನು ಆದಷ್ಟು ಬೇಗ ಸುನಂದ ಬನಪ್ಪನವರಿಗೆ ಒಪ್ಪಿಸಿಬಿಡಲು ಒತ್ತಾಯ ಮಾಡುತ್ತಿದ್ದಳು.

ಗಂಗೆ ಸುನಂದ ಅವರ ಮನೆಗೆ ಹೋಗಬೇಕೆಂದು ಅಂದುಕೊಳ್ಳುತ್ತಿದ್ದರೂ ಆಕೆ ಇವಳ ಕೈಗೆ ಸಿಗುತ್ತಲೇ ಇರಲಿಲ್ಲ. ಬೆಂಗಳೂರಿಗೆ ಅಲ್ಲಿ ಇಲ್ಲಿಗೆ ಹೋಗಿ ಬಿಡುತ್ತಿದ್ದರು. ಅವರ ಓಡಾಟ ಬಹಳವೇ, ಹೆಸರಿಗೆ ಮೈಸೂರಲ್ಲಿ ಬಂಗಲೆ. ಆದರೆ ಅವರನ್ನು ಹಿಡಿಯಲು ಬೆಂಗಳೂರಿಗೊ, ದಿಲ್ಲಿಗೊ ಓಡಿ ಹೋಗುವುದೇ ಸುಲಭವಿತ್ತು. ತಿಂಗಳಲ್ಲಿ ಎಂಟು ದಿನ ಊರಲ್ಲಿರುತ್ತಿದ್ದರು. ಇಂತಹದ್ದರಲ್ಲೂ, ಮೈಸೂರಿನಲ್ಲೂ ನಾನಾ ಸಾಮಾಜಿಕ ಚಟುವಟಿಕೆಗಳು. ಇದರಲ್ಲಿ ಒಂದು ದೇವಸ್ಥಾನದ ಜವಾಬ್ದಾರಿಯಾಗಿತ್ತು.

ಗಂಗೆ ಸುನಂದಮ್ಮ ಸಿಕ್ಕು ಅವಳು ಬೇರೆ ಕಡೆ ಹೋಗುವ ಕಾಲ ಎಷ್ಟು ದಿನ ಕಳೆದರೂ ಸಾಧ್ಯವಾಗಲೇ ಇಲ್ಲ. ಅವಳಿಗೆ ಭಟ್ಟರ ಮನೆಯ ಆಶ್ರಯ ಮುಳ್ಳಿನ ಮೇಲೆ ನಿಂತಂತಾಗಿತ್ತು. ಶೀನಯ್ಯನ ಜೊತೆ ಬೇರೆ ಎಲ್ಲಾದರೂ ತಾನು ಇರಲು ಜಾಗ ನೋಡಿಕೊಡುವಂತೆ ಕಾಡಿದಳು.

ಅಷ್ಟರಲ್ಲಿ ಒಂದು ಜಾಗ ಶೀನಯ್ಯನ ಕಣ್ಣಿಗೆ ಬಿದ್ದಿತು. ರಾಜಮನತನದ ಸಂಬಂಧಿ ಅರಸುಗಳೊಬ್ಬರ ಪುರಾತನ ಬಂಗಲೆ ಅದು. ಈಗ ಅಲ್ಲಿ ಯಾರೂ ವಾಸ ಮಾಡುತ್ತಿರಲಿಲ್ಲ. ಸರಿಯಾದ ವಾರಸುದಾರರಿಲ್ಲದೆಯೊ ಏನೊ ಕಾರಣ ಅದು ಕ್ರಮೇಣ ಪಾಳು ಬೀಳತೊಡಗಿತ್ತು. ವಾರಸುದಾರರಿದ್ದರೂ ಈ ದೊಡ್ಡ ಬಂಗಲೆಯನ್ನು ಸುಸ್ಥಿತಿಯಲ್ಲಿಡಲು, ರಿಪೇರಿ ಮಾಡಲು ಮಾಲೀಕರಿಗೆ ಬಹುಶಃ ಆರ್ಥಿಕ ಅಡಚಣೆ ಇದ್ದಿರಬಹುದು. ಒಟ್ಟಿನಲ್ಲಿ ಬಂಗಲೆ ಹಾಳು ಬೀಳುತ್ತಿರುವು ದೊಂದೇ ಕಾಣುತ್ತಿತ್ತು. ಜನ ಈ ಬಂಗಲೆ ಬಗ್ಗೆ ಊಹಾಪೋಹಗಳನ್ನು ಮಾಡಿ ಸುಮ್ಮನಾಗಿಬಿಟ್ಟಿದ್ದರು. ಕೆಲವರು ಇದನ್ನು ಆಫೀಸು ಮಾಡುತ್ತಾರೆ, ಸ್ಕೂಲು ಮಾಡಿಸುತ್ತಾರೆ, ಅತಿಥಿ ಗೃಹ ಮಾಡುತ್ತಾರೆ ಎಂದು ತಮಗೆ ತೋಚಿದಂತೆ ಮಾತಾಡುತ್ತಿದ್ದರೂ ಬಂಗಲೆ ಮಾತ್ರ ಮುದಿ ಮುದುಕಿ ಕೈಲಾಗದೆ ಮೂಲೆಯಲ್ಲಿ ಸುಮ್ಮನೆ ಬಣ್ಣಗೆಟ್ಟು ಕುಳಿತುಬಿಟ್ಟಂತೆ ಕುಳಿತುಬಿಟ್ಟಿತ್ತು.

ಈ ಮನೆಗೊಬ್ಬ ಮುದಿ ವಾಚ್‌ಮನ್, ಸದಾ ತೂಕಡಿಸುತ್ತಾ ಕುಳಿತಿರುತ್ತಿದ್ದ. ಮನೆಯ 'ಕೇರ್ ಟೇಕರ್' ಆಗಿದ್ದೊಂದು ವ್ಯಕ್ತಿ ಮಾತ್ರ ಇವನ ಸಂಬಳ ಕ್ಷಿಪ್ರವಾಗಿ ಕೊಟ್ಟು ಬಿಡುತ್ತಿದ್ದ. ಅರಸು ಬಂಗ್ಲೆಯಲ್ಲಿ ಒಂದು ಗಾಡಿ ಖಾನೆ ಇತ್ತು. ಅಲ್ಲಿ ಯಾರೂ ವಾಸ ಮಾಡುತ್ತಿರಲಿಲ್ಲ. ಶೀನಯ್ಯ ವಾಚ್‌ಮನ್ ಮೂಲಕ ಕೇರ್‌ಟೇಕರನ ಅಪ್ಪಣೆ ಪಡೆದು ಖಾಲಿ ಬಿದ್ದ ಗಾಡಿ ಖಾನೆಗೆ ದೇವಸ್ಥಾನದ ಈ ಕೆಲಸದಾಳಿಗೆ ಅಲ್ಲಿರಲು ಒಪ್ಪಿಗೆ ಪಡೆದು, ಗಂಗೆಗೆ ವಿಷಯ ತಿಳಿಸಿದ. ಗಂಗೆ ಅಲ್ಲಿರಲು ಒಪ್ಪಿಕೊಂಡಳು. ದೇವಸ್ಥಾನದ ದೊಡ್ಡ ಬೀದಿ ಕೊನೆಯಲ್ಲೆ ಆ ಪಾಳು ಬಂಗಲೆ ಇದ್ದದ್ದರಿಂದ ಅವಳಿಗೆ ಕೆಲಸಕ್ಕೆ ಹೋಗಲು ಅನಾನುಕೂಲತೆ ಏನೂ ಇರಲಿಲ್ಲ.

ಅವಳಿಗೆ ಶ್ರೀಧರ ಭಟ್ಟರ ಆಸರೆಯಿಂದ ಬಿಡುಗಡೆ ಹೊಂದುವುದಷ್ಟೇ ಬೇಕಿತ್ತು. ದೆವ್ವದ ಬಂಗಲೆ, ಪಾಳು ಬಂಗಲೆ ಯಾವುದೂ ಅವಳಿಗೆ ಅಡ್ಡಿ ಬರುವಂತೆ ಇರಲಿಲ್ಲ.

ಅರಸರ ಬಂಗಲೆಯ ದೊಡ್ಡ ಕಾಂಪೌಂಡ್‌ನಲ್ಲಿ ಯಥೇಚ್ಛವಾಗಿ ಬೆಳೆದ ಕಳೆಗಳ ಮಧ್ಯೆ ಸಂಪಿಗೆ, ಬುಗುರಿ, ಮಾವು, ತೆಂಗು, ಬಕುಳ, ಹಲಸಿನ ಮರಗಳು ಬಲಿತು ತೋಟ ಕಾಡಾಗಿಹೋಗಿತ್ತು. ಈ ವೃಕ್ಷ ಸಮೂಹದ ನೆರಳಲ್ಲಿ ಪಾಳಿನ ಹಾದಿ ಹಿಡಿದಿದ್ದ ಗಾಡಿ ಖಾನೆ ಹುದುಗಿ ಹೋಗಿತ್ತು. ಇಲ್ಲಿ ಗಂಗೆ ತನ್ನ ಸಣ್ಣ ಮಗಳೊಂದಿಗೆ ಅಜ್ಞಾತವಾಸ ಪ್ರಾರಂಭಿಸಿದಳು. ದೇವಸ್ಥಾನದ ಶೆಡ್ಡಿನಲ್ಲಿದ್ದಾಗ ಅವಳ 'ಪಾಪೂ'ಗೆ ರಕ್ಷಣೆ ಇತ್ತು. ಸದಾ ತಾಯೊಂದಿಗೇ ಇರುತ್ತ ಅವಳು ಕೆಲಸಕ್ಕೆ ಹೋಗುವಾಗಲೂ ಬೆನ್ನು ಹತ್ತಿ ಇರುತ್ತಿದ್ದಳು. ಅವಳ ಪಾಪೂ ಈಗ ಕಾಡುಪಾಪ ಆಗಿ ಎಲ್ಲಾದರೂ ಅರಕ್ಷಿತಳಾಗುವಳೆಂದು ಗಂಗೆ ಭಯ ಗೊಂಡಳು. ದೇವಸ್ಥಾನದ ಆವರಣ ಮಗುಗೆ ಸುರಕ್ಷಿತೆ ಕೊಟ್ಟಂತೆ ಈ ಪಾಳು ಜಾಗ ರಕ್ಷಣೆ ಕೊಡುವುದಿಲ್ಲ!

ಪಾಪೂಗೆ ಇನ್ನೂ ಒಂದು ಹೆಸರನ್ನೇ ಇಡದೆ ಎಲ್ಲರಿಗೂ ಬರಿ 'ಪಾಪು' ಆಗೆ ಉಳಿದಿತ್ತು. ಗಂಗೆಗೆ ಈ ಪಾಪು ಬಿಟ್ಟರೆ ಇಡೀ ಜಗತ್ತಿನಲ್ಲಿ ಇನ್ನೇನೂ ಕಾಣ ಬರುತ್ತಿರಲಿಲ್ಲ. ತನ್ನ ಉಸಿರು ಇರುವುದೇ ಪಾಪುಗಾಗಿ. ತೀರ ಚಟುವಟಿಕೆಯ ಪಾಪು ಮಾಡಿದ್ದೆಲ್ಲಾ ಗಂಗೆಗೆ ಅದ್ಭುತವಾಗೇ ಕಾಣುತ್ತಿತ್ತು. ಕೆಲಸಕ್ಕೆ ಹೊರಡಬೇಕಾದರೆ ಮೊದಲು ಪಾಪುನ ಸುರಕ್ಷತೆ ಬಗ್ಗೆಯೇ ಆಲೋಚಿಸಿ ನಂತರ ಕೆಲಸದ ಬಗ್ಗೆ ಮನಸ್ಸು. ಈಗ ಕರೆ ಬಂದಾಗಲೆಲ್ಲ ಕೆಲಸಕ್ಕೆ ಓಡಿಬಿಡುತ್ತಿರಲಿಲ್ಲ. ಕೆಲಸಕ್ಕೆ ಒಂದು ಕ್ಷಿಪ್ತ ವೇಳೆ ಇಟ್ಟುಕೊಂಡಳು. ಹೀಗಾಗಿ ಮಧ್ಯಾಹ್ನದ ವೇಳೆಯಲ್ಲಿ ಅವಳಿಗೆ ಬಿಡುವು ಸಿಗುತ್ತಿತ್ತು. ಆ ವೇಳೆಯಲ್ಲಿ ಕೂಸಿನೊಂದಿಗೆ ಗಾಡಿಖಾನೆಯಲ್ಲಿ ಇದ್ದುಕೊಂಡೇ ತನ್ನ ಕಸೂತಿ ಕೆಲಸವನ್ನು ಹೆಚ್ಚಿಸಿಕೊಂಡಳು. ಸುನಂದಮ್ಮ ಗಂಗೆಗೆ ಸೀರೆ, ಶಾಲು, ಸಲ್ವಾರ್ ಕಮೀಜುಗಳು, ಲಂಗ ಇವನ್ನೆಲ್ಲಾ ಸೊಸೈಟಿ ವತಿಯಿಂದ ಕಸೂತಿ ಮಾಡಲೂ ಕೊಡಿಸುತ್ತಿದ್ದರು. ಇದು ಅವಳ ಸಂಪಾದನೆಗೆ ಬಲ ಕೊಟ್ಟಿತ್ತಲ್ಲದೆ ಹೊತ್ತು ಹೋಗಲು ಒಳ್ಳೆ ಮಾರ್ಗ ಕೊಟ್ಟಿತು.

ಇಲ್ಲಿ ಅಕ್ಕ ಪಕ್ಕದವರ್‍ಯಾರೂ ಇರಲಿಲ್ಲ. ವಿಶಾಲ ಆವರಣದ ಆಚೆ ಈಚೆಗೆಲ್ಲಾ ಖಾಲಿ ಸೈಟುಗಳು. ಗಂಗೆಗೆ ಕಾಡು ಹರಟೆ ಹೊಡೆಯುವ ನೆರೆಹೊರೆ ಬೇಕಾಗಿಯೂ ಇರಲಿಲ್ಲ. ಅತಿಯಾದ ತುಂಟಾಟ ಮಾಡುವ ಮಗು, ದೇವಸ್ಥಾನ, ಕಸೂತಿಗಳೇ ಅವಳಿಗೆ ಸಾಕಾಗಿತ್ತು. ಹಳ್ಳಿಯಲ್ಲಿದ್ದಂತೆ ಸೀರೆ ಎಳೆಗಳನ್ನು ಎಳೆದುಕೊಂಡು ಕಸೂತಿ ಸಾಂಪ್ರದಾಯಿಕ ಕಟ್ಟುನಿಟ್ಟಿನಲ್ಲಿ ಈಗ ಅವಳು ಮಾಡುವುದಕ್ಕಾಗುತ್ತಿರಲಿಲ್ಲ. ಬಣ್ಣ ಬಣ್ಣದ ದಾರಗಳನ್ನು ತಂದುಕೊಂಡು ಸುಲಭ ರೀತಿಯಲ್ಲಿ ಕಸೂತಿ ಮಾಡಿಬಿಡಬಹುದು. ಪಟ್ಟಣದ ಅನೇಕ ಗ್ರಾಹಕರಿಗೆ ಆ ಜಾನಪದ ಕಲಾವಂತಿಕೆಗೂ ಈಗಿನ ಫ್ಯಾಷನ್ ಕಲೆಗೂ